# ಮಕ್ಕಳಿಗಾಗಿ ಬೈಬಲ್

## ಅರ್ಪಿಸುವ



# ಯೇಸು ಹನ್ನೆರಡು ಶಿಷ್ಯರನ್ನು ಆರಿಸಿಕೊಂಡಿದ್ದು


ಬರಹಗಾರರು: Edward Hughes
ಚಿತ್ರಲೇಖಕರು: Byron Unger; Lazarus
ಪದ್ಮಾ ಸೈಲೇಸ್: Vinay Shirol
ಅಳವಡಿಸುವವರು: E. Frischbutter; Sarah S.



60ರ 39ನೇ ಕಥೆ

**www.M1914.org**

***Bible for Children,*** *PO Box 3, Winnipeg, MB R3C 2G1 Canada*



ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು.
ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.


ಕನ್ನಡ Kannada

ಯೇಸು ಜನರನ್ನು ಗುಣಪಡಿಸುತ್ತಾ, ಕಷ್ಟ ತೊಂದರೆಗಳಲ್ಲಿದ್ದಂತವರಿಗೆ ಶಾಂತಿಯನ್ನು ಕೊಡುತ್ತಾ ಅನೇಕ ಅದ್ಭುತ ಕರ್ಯಗಳನ್ನು ಮಾಡಿದನು.



1

ಜನರು ಆತನಿಂದ ಸಹಾಯ ಮತ್ತು ಸ್ವಸ್ಥತೆಯನ್ನು ಹೊಂದಲು ಬರುತ್ತಿದ್ದರು, ...



2


... ತನ್ನನ್ನು ಹಿಂಬಾಲಿಸುತ್ತಿದ್ದ ಜನರೆಲ್ಲಿ ಹನ್ನೇರಡು ಜನರನ್ನು ದೇವರ ಸೇವೆಗಾಗಿಯೂ ಮತ್ತು ತನಗೆ ಸಹಾಯಕವಾಗಿಯೂ ಅವರನ್ನು ತನ್ನ ಶಿಷ್ಯರನ್ನಾಗಿ ಮಾಡಿಕೊಂಡನು.
3


ನೀವು ಪ್ರಾಮುಕ್ಯವಾದದ್ದನ್ನು ನೀಮ್ಮ ಜೀವನನ್ನು ಆಯ್ದುಕೋಳ್ಳವಾಗ ದೇವರಲ್ಲಿ ಪ್ರಾರ್ಥಿಸುತ್ತಿರಾ? ಆದರೆ ಯೇಸು ಪ್ರಾರ್ಥನೆ ಮಾಡಿದ ಏಕಾಂತವಾದ ಬೆಟ್ಟದ ಮೇಲೆ ಪರಲೋಕದ ತನ್ನ ತಂದೆಯೊಂದಿಗೆ ಮಾತಾಡಿದನು. ಯೇಸು ಬೆಳಿಗ್ಗೆಯಿಂದ ಸೂರ್ಯ ಮುಳುಗುವವರೆಗೂ ಪ್ರಾರ್ಥಿಸಿದನು.
4


ಯೇಸು ರಾತ್ರಿ ಇಡೀ ಪ್ರಾರ್ಥನೆಯಲ್ಲಿ ಕಳೆದನು.
5


ಬೆಳಗಿನ ಜಾವ ಯೇಸು ತನ್ನ ಹಿಂಬಾಲಕರನ್ನು ಮತ್ತು ಆತನನ್ನು ನಂಬಿ ಸೇವೆಮಾಡುತ್ತಿದ್ದ ಸ್ನೇಹಿತರನ್ನು ಕರೆದು ಅವರಲ್ಲಿ ೧೨ ಜನರನ್ನು ತನ್ನ ಶಿಷ್ಯರನ್ನಾಗಿ ಅಂದರೆ ಅಪೊಸ್ತಲರನ್ನಾಗಿ ನೇಮಿಸಿದನು.
6


ಯೇಸು ಆರಿಸಿಕೊಂಡ ಮೊದಲ ಇಬ್ಬರು ಶಿಷ್ಯರಾದ ಸಿಮಿಯೋನ ಪೆತ್ರ ಮತ್ತು ಅಂದ್ರೆಯ ಇಬ್ಬರು ಸಹೋದರರಾಗಿದ್ದರು, ಯೇಸುವಿನ ಕರೆಗೆ, ಅವರು ಮಾಡುತ್ತಿದ್ದಂತಹ ಮೀನ ಹಿಡಿಯುವ ಕೆಲಸ (ವ್ಯಾಪಾರ) ವನ್ನು ಬಿಟ್ಟು ಆತನನ್ನು ಹಿಂಬಾಲಿಸಿದರು.
7


ಜಬದಿಯನ ಮಕ್ಕಳಾದ ಯಾಕೋಬ ಮತ್ತು ಯೋಹಾನರು ಸಹ ಮೀನನ್ನು ಹಿಡಿಯುವ ಬಲೆಯನ್ನು ಬಿಟ್ಟರು.
8

ಯೇಸವು ಇನ್ನು ಅನೇಕರನ್ನು ಆರಿಸಿಕೊಂಡನು, ಅವರು ಯಾರಾರಂದರೆ
ಫಿಲಿಪ್ಪ, ಬಾರ್ತೊಲೊಮಾಯ, ಮತ್ತಾಯ, ತೋಮ, ಅಲ್ಫಾಯನ
ಮಗನಾದ ಯಾಕೋಬ, ಮತಾಬಿಮಾನಿ ಎನಿಸಿಕೊಂಡ
ಸೀಮೋನ, ಯಾಕೋಬನ ಮಗನಾದ ಯೂದ,
ಮತ್ತು ಆತನನ್ನು ಹಿಡಿದುಕೊಡುವ
ದ್ರೋಹಿಯಾದ
ಇಸ್ಕರಿಯಾದ
ಯೂದ, ಇವರೇ.



9

ಯೇಸು ಅವರಿಗೆ ಕಲಿಸಿದ್ದೇನೆಂದರೆ, ಅವನು ಹೇಳಿದ
ಹಾಗೆ ಮಾಡುವವನು ಗಟ್ಟಿಯಾದ ಬಂಡೆಯಮೇಲೆ
ಮನೆಕಟ್ಟಿಕೊಂಡವನಂತಿರುವನು,
ಅದಕ್ಕೆ ಎಂತಹ ಬಿರುಗಾಳಿ
ಬಂದು ಬಡೆದರು ಬಿಳುವುದಿಲ್ಲ.



10

ಆದರೆ ಯಾವನು ಅವನು ಮಾತಿಗೆ ವಿಧೇಯನಾಗವುದಿಲ್ಲವೂ ಅಂತವನು
ಮರಳಿನ ಮೇಲೆ ಮನೆ ಕಟ್ಟಿಕೊಂಡವನಾಗಿದ್ದಾನೆ, ಅದಕ್ಕೆ ಬಿರುಗಾಳಿ ಬಂದು
ಅಪ್ಪಳಿಸಿದಾಗ ಅದು ಬಿಳ್ಳುವಂತಹದಾಗಿತ್ತು.



11

ಯೇಸುವಿನ ಕೇಲವು ಆಜ್ಞೆಗಳು ಅಷ್ಟು ಸರಳವಾಗಿರಲ್ಲಿಲ್ಲಾ.
"ಯಾವನಾದರು ನೀಮನ್ನು ಬಲ ಕೆನ್ನೇಗೆ ಹೊಡೆದರೆ,
ನಿನ್ನ ಎಡ ಕೆನ್ನೆಯನ್ನು ತೊರಿಸು" ಎಂತಲೂ,
ನಿನ್ನ ವೈರಿಗಳನ್ನು ಪ್ರೀತಿಸು, ಎಂದು ಕಲಿಸಿದನು,
ಜನರಿಗೆ ಯೇಸುವಿನ ಹಾಗೆ ಜೀವಿಸಲು
ದೇವರ ಸಹಾಯ ಬೇಕು.



12

ಯೇಸು ಏಕಾಂತವಾಗಿ ಪ್ರಾರ್ಥಿಸಲು
ಜನರಿಗೆ ಉಪದೇಶಿಸಿದನು, ಅನೇಕ
ಧರ್ಮದ ನಾಯಕರು, ಜನರು
ನೊಡಲಿ ಎಂದು ತೋರ್ಪಡಿಕೆಗೆ
ಪ್ರಾರ್ಥನೆ ಮಾಡುತ್ತಿದ್ದರು.



13

ಯೇಸು ಹೇಳಿದ್ದು ಯಾರಾರು
ದೇವರ ಮೇಲೆ ಬರವಸೆಯಿಡುತ್ತಾರೋ,
ಅಂಥವರಿಗೆ ಬಟ್ಟೆ, ಆಹಾರವನ್ನು
ಒದಗಿಸುತ್ತಾನೆ ಎಂದು ಹೇಳಿದನು
ಆಕಾಶದಲ್ಲಿ ಹಾರಾಡುವ ಹಕ್ಕಿಗಳು, ...



14













ಯೇಸು ಹನ್ನೆರಡು ಶಿಷ್ಯರನ್ನು ಆರಿಸಿಕೊಂಡಿದ್ದು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಮತ್ತಾಯ **4–7**, ಮಾರ್ಕ **1**, ಲೂಕ **6**

"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."
ಕೀರ್ತನೆ **119:130**

ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.

ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.

ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ **3:16**

ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.